# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಾಗಲಕೋಟೆ-ಕುಡಚಿ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನ ವೆಚ್ಚಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 35 ರಾರಾಹೆ 2009 ದಿನಾಂಕ : 24.04.2010
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2010, ದಿನಾಂಕ: 25.02.2011, 19.07.2012, 19.07.2012, 19.07.2012, 07.03.2013, 30.03.2013,
3. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾರಾಹೆ 2013, ದಿನಾಂಕ: 06.12.2013, 29.03.2014, 19.08.2014, 28.03.2015, 29.09.2015, 05.02.2016, 25.02.2016, 15.03.2016 14.09.2016, 03.11.2016. 03.11.2016. 05.11.2016. 05.08.2017. 16.09.2017, 22.09.2017 (ಭಾಗ-2),
4. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018, ದಿನಾಂಕ: 12.09.2018. 12.09.2018, 09.10.2018, 17.11.2018, 25.04.2019, 25.04.2019
5. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 25 ರಾರಾಹೆ 2019 ದಿನಾಂಕ: 12.06.2019, 12.06.2019, 12.06.2019
6. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018, ದಿನಾಂಕ:30.03.2020, 25.08.2020
7. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 77 ರಾರಾಹೆ 2021 (IV)ದಿನಾಂಕ:26.03.2021.
8. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018, ದಿನಾಂಕ:06.07.2021, 30.07.2021, 01.10.2021.
9. ಪತ್ರ ಸಂಖ್ಯೆ: ಕಂಶಾ:ಎಲ್ಎಕ್ಯೂ:ಸಿಆರ್ -130 (1)/2010-11, ದಿನಾಂಕ:06.11.2021 ಜಿಲ್ಲಾಧಿಕಾರಿಗಳ ಕಾರ್ಯಲಯ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.

***

ಪ್ರಸ್ತಾವನೆ:

1) ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರಿ ಆದೇಶದಲ್ಲಿ ಬಾಗಲಕೋಟೆ - ಕುಡಚಿ ಹೊಸ ರೈಲು ಮಾರ್ಗ ಯೋಜನೆಯನ್ನು 50:50 ಸಹಭಾಗಿತ್ವ ಆಧಾರದಡಿ ಕೈಗೆತ್ತಿಕೊಳ್ಳಲು ಹಾಗೂ ಅಗತ್ಯ ಜಮೀನನ್ನು ಉಚಿತವಾಗಿ ನೀಡಲು ಅನುಮೋದನೆ ನೀಡಲಾಗಿದೆ.

2) ಮೇಲೆ ಓದಲಾದ ಕ್ರ.ಸಂ (2) ರಿಂದ (8)ರಲ್ಲಿ ಸರ್ಕಾರದ ಆದೇಶಗಳಲ್ಲಿ ಬಾಗಲಕೋಟೆ – ಕುಡಚಿ ಹೊಸ ರೈಲು ಮಾರ್ಗ ಯೋಜನೆಗಾಗಿ ನೈರುತ್ಯ ರೈಲ್ವೆಗೆ ಒಟ್ಟಾರೆಯಾಗಿ ರೂ.149.22 ಕೋಟಿ ಬಿಡುಗಡೆಗೊಳಿಸಲಾಗಿದ್ದು, ಭೂಸ್ವಾಧೀನ ವೆಚ್ಚಕ್ಕಾಗಿ ಒಟ್ಟಾರೆಯಾಗಿ ರೂ.332.02 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಒಟ್ಟಾರೆಯಾಗಿ ಈ ಕಾಮಗಾರಿಗೆ ರೂ.481.24 ಕೋಟಿಗಳ ಅನುದಾನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

01/12/21 Sr. Pgmr

...2..

3) ಮೇಲೆ ಓದಲಾದ ಕ್ರ.ಸಂ (9)ರ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇವರಲ್ಲಿ ದಾಖಲಾದ ಎಂ.ಎಫ್.ಎ. ನಂ 102607/2019, 104379/2019, 100378/2020, 102606/2019, 100380/2020, 102092/2018, 104525/2019, 104378/2019, 102087 ಪ್ರಕರಣಗಳಲ್ಲಿ ದಿನಾಂಕ:15.11.2021ರ ವರಗಿನ ಲೆಕ್ಕಾಚಾರದಂತೆ ಶೇ.50 ರಷ್ಟು ಹೆಚ್ಚುವರಿ ಪರಿಹಾರ ಧನವನ್ನು ಮಾನ್ಯ ನ್ಯಾಯಾಲಯಕ್ಕೆ ಠೇವಣಿ ಮಾಡಲು ಹಣ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿ ಬಾಗಲಕೋಟೆ ರವರು ಕೋರಿರುತ್ತಾರೆ.

4) ಜಿಲ್ಲಾಧಿಕಾರಿ, ಬಾಗಲಕೋಟೆ ಇವರ ಪ್ರಸ್ತಾವನೆಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ ಮೂಅಇ 08 ರಾರಾಹೆ 2021</u>**
**<u>ಬೆಂಗಳೂರು, ದಿನಾಂಕ:26.11.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೇಲಕಂಡ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇವರಲ್ಲಿ ದಾಖಲಾದ ಎಂ.ಎಫ್.ಎ. ಪ್ರಕರಣಗಳಲ್ಲಿ ದಿನಾಂಕ:15.11.2021ರ ವರಗಿನ ಲೆಕಚಾರದಂತೆ ಶೇ.50 ರಷ್ಟು ಹೆಚ್ಚುವರಿ ಪರಿಹಾರ ಧನದ ಮೊತ್ತ ರೂ.22,08,75,710/- ಗಳನ್ನು (ರೂಪಾಯಿ ಇಪ್ಪತ್ತೇರಡು ಕೋಟಿ ಎಂಟು ಲಕ್ಷದ ಎಪ್ಪತ್ತೈದು ಸಾವಿರದ ಏಳನೂರು ಹತ್ತು ಮಾತ್ರ) ಅನುದಾನವನ್ನು ನ್ಯಾಯಾಲಯಕ್ಕೆ ಠೇವಣಿ ಮಾಡಲು ಜಿಲ್ಲಾಧಿಕಾರಿ ಬಾಗಲಕೋಟೆ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2) ಈ ಮೊತ್ತವನ್ನು 2020-21 ನೇ ಸಾಲಿನಲ್ಲಿ ಒದಗಿಸಿರುವ ಅನುದಾನದ ಲೆಕ್ಕ ಶೀರ್ಷಿಕೆ ""5465-01-190-3-05-132 ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ - ಬಂಡವಾಳ ವೆಚ್ಚಗಳು" ಇದರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3) ಈ ಮೊತ್ತವನ್ನು ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ಇವರ ಖಾತೆಗೆ ಖಜಾನೆ-2 ರಲ್ಲಿ ಅಪ್‌ಲೋಡ್ ಮಾಡುವುದು. ಸದರಿ ಮೊತ್ತವನ್ನು ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ಇವರು ಖಜಾನೆ-2 ರಲ್ಲಿ ಡ್ರಾ ಮಾಡಲು ಅಧೀಕರಿಸಿದೆ.

4) ಉಪ ವಿಭಾಗಾಧಿಕಾರಿ, ಬಾಗಲಕೋಟೆ ಇವರು ಈ ಹಣವನ್ನು ವೆಚ್ಚ ಮಾಡಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ,ಬಾಗಲಕೋಟೆ ಇವರ ಮೂಲಕ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5) ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿನಾಂಕ:30.09.2021 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kam

(ಎಸ್.ಎನ್.ಕಲಾವತಿ),
ಸರ್ಕಾರದ ಅಧೀನ ಕಾರ್ಯದರ್ಶಿ-೧
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ.

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಆಡಿಟ್ – 1,23 O & ಇ), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು– 01.

2. ಮುಖ್ಯ ವ್ಯವಸ್ಥಾಪಕರು, (ನಿರ್ಮಾಣ) ನೈರುತ್ಯ ರೈಲ್ವೆ ನೈರುತ್ಯ ರೈಲ್ವೆ, ಕೇಶವಪುರ, ಹುಬ್ಬಳ್ಳಿ
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
4. ಮುಖ್ಯ ಆಡಳಿತಾಧಿಕಾರಿ( ನಿರ್ಮಾಣ), ನೈರುತ್ಯ ರೈಲ್ವೆ, ೧ಲ ಮಿಲ್ಲರ್ಸ್ ರಸ್ತೆ, ಬೆಂಗಳೂರು.
5. ಮುಖ್ಯ ಅಭಿಯಂತರರು (ನಿರ್ಮಾಣ) ನೈರುತ್ಯ ರೈಲ್ವೆ, ಕೇಶವಪುರ, ಹುಬ್ಬಳ್ಳಿ.
6. ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು
7. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
8. ಉಪ ವಿಭಾಗಾಧಿಕಾರಿ, ಬೈಲಹೊಂಗಲ, ಬೈಲಹೊಂಗಲ ಜಿಲ್ಲೆ.
9.ಖಜಾನೆ ನಿರ್ದೇಶಕರು, ವಿ. ವಿ ಗೋಪುರ, ಬೆಂಗಳೂರು.
10.ಆಯುಕ್ತರು, ಟಿ. ಎನ್. ಎಂ. ಸಿ., ಖನಿಜ ಭವನ, ಬೆಂಗಳೂರು.
11.ಯೋಜನಾ ನಿರ್ದೇಶಕರು, ಖಜಾನೆ-೨, ಗಾಂಧಿನಗರ, ಬೆಂಗಳೂರು.
12.ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
13.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು.
14. ಸರ್ಕಾರದ ಅಪರ ಕಾರ್ಯದರ್ಶಿ (ರೈಲ್ವೆ) ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು.
15. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
16.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.